ಇಂತಹದ್ದೊಂದು ಕೆಲಸವಾಗಿದೆಯೆಂದರೆ ಪೊಲೀಸರು ಮೊಟ್ಟ ಮೊದಲು ಬಂದು ನಿಲ್ಲುತ್ತಿದ್ದದ್ದು ಇದೇ ಹನುಮಕ್ಕನ ಮನೆಯ ಮುಂದೆ. ಸುಮಾರು ಐವತ್ತಕ್ಕೂ ಹೆಚ್ಚು ಹುಡುಗ, ಹುಡುಗಿಯರನ್ನು ಕಸುಬಿನಲ್ಲಿಟ್ಟುಕೊಂಡಿದ್ದಳು. "ನಾವೇನು ಬಡವರ ದುಡ್ಡು ಕದಿತೀವಾ" ಎನ್ನುವುದು ಅವಳ ದಿನಂಪ್ರತಿಯ ಘೋಷವಾಕ್ಯವಾಗಿತ್ತು.

ಅಂತಹ ಹನುಮಕ್ಕನಿಗೆ ಆಪ್ತರಕ್ಷಕ ಇದೇ ಮಣಿವೇಲು. ಅವರಿವರ ಕೈ ಕಾಲು ಹಿಡಿದು ಪೇಪರ್ ಹಾಕಿ, ಆ ಈ ಅಂಗಡಿಯಲ್ಲಿ ಕಸ ಹೊಡೆದು ಅಂತೂ ಇಂತೂ ಲಾಯರ್‌ಗಿರಿ ಮುಗಿಸಿದವನಿಗೆ ದೇವತೆಯಂತೆ ಸಿಕ್ಕಿದ್ದವಳು ಈ ಹನುಮಕ್ಕ. ವಕೀಲ ವೃತ್ತಿಯ ಆರಂಭದಲ್ಲಿ ಯಾರೊಬ್ಬರೂ ಇವನನ್ನು ನಂಬದೇ ವರುಷಗಟ್ಟಲೆ ಯಾವೊಂದು ಫೈಲ್ ಇಲ್ಲದೆ ಖಾಲಿ ಕೂತಾಗ ಇವನನ್ನು ನಂಬಿ ಮೊಟ್ಟ ಮೊದಲ ಕೇಸ್ ನೀಡಿದವಳು ಇದೇ ಹನುಮಕ್ಕ. ಹೀಗಾಗಿ ಅವ ಹನುಮಕ್ಕನನ್ನು ತನ್ನ ಪಾಲಿನ ದೇವತೆ ಎಂತಲೇ ನಂಬಿದ್ದ. ಆಕೆ, ಆಕೆಯ ಕಡೆಯವರು ಎಲ್ಲೇ ಸಿಕ್ಕಿ ಹಾಕಿಕೊಳ್ಳಲಿ ತಾನೇ ಹೋಗಿ ಜಾಮೀನು ಕೊಟ್ಟು ಬಿಡಿಸಿ ತರುತ್ತಿದ್ದ. ಅವಳೂ ಹಾಗೆಯೇ ಇದ್ದಳು. ಇವನು ಸಣ್ಣವ ಎಂತಾಗಲಿ, ಹೊಸಬ ಎಂತಾಗಲಿ ಎಣಿಸದೆ ಇವನಿಗೆ ಬರಬೇಕಾದ ಫೀಸನ್ನು ಮನೆ ಬಾಗಿಲಿಗೆ ತಲುಪಿಸುತ್ತಿದ್ದಳು. ಈ ಎಲ್ಲ ಕತೆಗಳು ತೀರ ಈಗ ಹದಿನೈದು ವರ್ಷದ ಹಿಂದಿನದ್ದಾದರೂ ಮಣಿವೇಲು ಇದೀಗ ನಗರದ ಫೇಮಸ್ ಕ್ರಿಮಿನಲ್ ವಕೀಲನಾಗಿದ್ದರೂ ಹನುಮಕ್ಕನನ್ನು ಹೆಚ್ಚಿಗೆ ಕಡೆಗಣಿಸಿದ್ದಿಲ್ಲ. ಈಗೀಗ ಅವನ ಗೌರವಗಳು ಸಮಾಜದಲ್ಲಿ ಏರಿಕೆಯಾದ ಮೇಲೆ ಅವ ಸಣ್ಣ ಪುಟ್ಟ ಕೆಲಸಗಳಿಗೆ ತಾನು ಹೋಗುವುದಿಲ್ಲ. ತನ್ನ ಜ್ಯೂನಿಯರ್‌ಗಳನ್ನು ಕಳಿಸುತ್ತಾನೆ. ಹಾಗೆಯೇ ಹನುಮಕ್ಕನೂ ಕೂಡ ಹೆಚ್ಚಿಗೆ ಏನೊಂದು ಜವಾಬ್ದಾರಿ ತೆಗೆದುಕೊಳ್ಳುವ ಗೋಜಿಗೆ ಹೋಗದೇ ತನ್ನ ಗ್ಯಾಂಗಿನವರಿಗೆ ಕೆಲಸ ವಹಿಸಿ ತಾನು ರಾಮ ಶಿವ ಎನ್ನುತ್ತ ಭಜನಾ ಮಂಡಳಿಯಲ್ಲಿ ಕೂರುತ್ತಾಳೆ.

ಮಣಿವೇಲು ತಗ್ಗಿದ ದನಿಯಲ್ಲಿ "ಏನಾಯಿತು" ಎಂದ. ಆಕೆ ಮುಸಿ ಮುಸಿ ಸದ್ದು ಮಾಡುತ್ತಲೇ "ಅಣ್ಣಾ ಮಂಜ" ಎಂದಳು. ಮಣಿವೇಲುವಿಗೆ ರೇಗಿ ಹೋಯಿತು. "ನೀನೇ ತಾನೆ ಅವನ ಬೈಕಿನಲ್ಲಿ ಸುತ್ತುತ್ತಿದ್ದೆಯಲ್ಲ" ಗರಂ ಆಗಿ ಪ್ರಶ್ನಿಸಿದ. ಆಕೆ "ಹೌದು" ಎಂದಳು. ಅವ ಏನನ್ನೋ ಮುಂದುವರೆಸುವಷ್ಟರಲ್ಲಿ ಆಕೆ "ಅಣ್ಣಾ ಪ್ರೀತಿಸಿದ್ದು ನಿಜ, ಆದರೆ ಅವ..." ಎಂದು ಆಕೆ ಗೀರಿದ ಗಾಯವನ್ನೊಮ್ಮೆ ನೋಡಿಕೊಳ್ಳುತ್ತ ಉಮ್ಮಳಿಸಿದಳು.

"ರಾತ್ರಿಯಲ್ಲಿ ಹೆಂಗಸರು ಹೊಸ್ತಿಲು ದಾಟಿದರೆ ಹೀಗೆ ಆಗೋದು" ಎಂದ ಮಣಿವೇಲು ಪಕ್ಕಾ ಟಿಪಿಕಲ್ ಗಂಡಸಿನ ಹಾಗೆ.

"ಸರ್ ಅವ ಮಾತಾಡಬೇಕು ಅಂತ ಕರೆದ" ಎಂದಳು.

"ಅವ ಕರೆದ, ನೀನು ಹೋದಿ. ಸರಿ ರಾತ್ರಿಯಲ್ಲಿ ಗಂಡಸರಾಡುವ ಮಾತು ಯಾವುದು ಅಂತ ಗೊತ್ತಿರಲಿಲ್ಲವಾ?" ಮಣಿವೇಲುವಿನ ಮಾತು ಅಗತ್ಯಕ್ಕಿಂತ ಹೆಚ್ಚು ಮೊನಚಾಗಿತ್ತು. ಅರುಂಧತಿಗೆ ಕಸಿವಿಸಿಯಾಯಿತು.

"ಏನಿದು ಹರೆಯದ ಮಗುವಿನೊಟ್ಟಿಗೆ ಈ ರೀತಿ ಮಾತು" ಹೇಳಬೇಕೆಂದುಕೊಂಡಳು.

ಆದರೆ ತಾನು ಮಾತಾಡುವಾಗ ಮಣಿವೇಲುವಿಗೆ ಯಾರಾದರೂ ಮಾತಾಡಿದರೆ ಇನ್ನಿಲ್ಲದಂತೆ ಕೋಪ ಬರುತ್ತದೆಯಾದ್ದರಿಂದ ಆಕೆ ಮಧ್ಯ ಮಾತಾಡುವುದನ್ನು ಬಿಟ್ಟು ವರ್ಷಗಳೇ ಕಳೆದು ಹೋಗಿದ್ದವು. ಹಾಗೊಮ್ಮೆ ಕಳೆದು ಹೋದ ಮಾತು ಈ ತಕ್ಷಣಕ್ಕೆ ನಾಲಿಗೆಯ ಮಟ್ಟಕ್ಕೆ ಎದ್ದು ಬರುವುದು ಸಾಧ್ಯವಿಲ್ಲದೇ ಇದ್ದುದ್ದರಿಂದ ಸುಮ್ಮನೆ ಕೂತು ನೋಡುವುದಲ್ಲದೆ ಏನನ್ನೂ ಮಾಡಲಿಲ್ಲ. ಆದರೆ ನೋಡಲು ತೀರಾ ಗಟ್ಟಿಮುಟ್ಟಾದ ದೇಹದ ಸ್ವಲ್ಪ ಪಾಶ್ ಎನ್ನುವಂತೆಯೇ ಕಾಣಿಸುತ್ತಿದ್ದ